

# ಅಂಡಕೋಶ ಹೊತ್ತ
# ಬೇಟೆಗಾರ ಜೇಡ

**ಈ ಜೇಡಕ್ಕೆ ಎಂಟು ಕಣ್ಣುಗಳಿವೆ ಎಂದು ಹೇಳಿದರೆ ನಿಮಗೆ ಆಶ್ಚರ್ಯವಾಗಬಹುದು! ತಲಾ ನಾಲ್ಕರಂತೆ ಮುಂಭಾಗದಲ್ಲಿ ಎರಡು ಸಾಲುಗಳಲ್ಲಿ ಈ ಕಣ್ಣುಗಳಿವೆ!**

■ ಪ್ರಕಾಶ ಎಸ್. ಮನ್ನಂಗಿ

ಚಿತ್ರ: ಆಕಾಶ



ಸಂಧಿಪದಿ ವಂಶ ಗೊತ್ತಲ್ಲ? ಇದರಲ್ಲಿ ಸಾವಿರ ಸಾವಿರ ಕೀಟಗಳಿವೆ. ಈ ವಂಶದ ಅರ್ಯಾಕ್ನಿಡ್ ವರ್ಗದಲ್ಲಿ ನಲವತ್ತು ಸಾವಿರ ಜೇಡಗಳಿವೆ. ಈಗ ಭೂಮಿಯಲ್ಲಿ ಕಂಡುಬರುತ್ತಿರುವ ಜೇಡಗಳು 200 ದಶಲಕ್ಷ ವರ್ಷಗಳಿಂದ ವಾಸಿಸುತ್ತಿವೆ.

ಈ ಜೇಡಗಳಲ್ಲಿ ವಿಲಕ್ಷಣವಾದ ಜೇಡವೊಂದಿದೆ. ಅದೇ ಬೇಟೆಗಾರ ಜೇಡ. ಇದಕ್ಕೆ ಆಂಗ್ಲ ಭಾಷೆಯಲ್ಲಿ ಹಂಟ್ಸ್ ಮನ್ ಸ್ಪೈಡರ್ ಎನ್ನುವರು. ಇವುಗಳ ವೇಗ ಮತ್ತು ಬೇಟೆಯ ಚಾಕಚಕ್ಯತೆಯಿಂದ ಸ್ಪರ್ಯಾಸಿಡೇ ಕುಟುಂಬದ ಅರ್ಯಾಕ್ನಿಡ್ ವರ್ಗಕ್ಕೆ ಸೇರಿಸಿದ್ದಾರೆ. ಬೇಟೆಗಾರ ಜೇಡದಲ್ಲಿ 13 ಜಾತಿಗಳು ಮತ್ತು 94 ಪ್ರಭೇದಗಳಿವೆ.

(8ನೇ ಪುಟ ನೋಡಿ)